**<u>16-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>**

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ಹೆಚ್.ಎಸ್.ಕೆ. ವಕೀಲರಿಂದಃ</u>

ನಾನು ಚಿಕ್ಕಮಗಳೂರು ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 104/2024 ರಂತೆ ಗಣೇಶ್, ಪ್ರಶಾಂತ್, ಸುರೇಶ್ ಮತ್ತು ಅನೀಲ್ ವಿರುದ್ಧ ದಾವೆ ಹೂಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಮೂಲ ದಾವೆ ಸಂಃ 104/2024 ರಲ್ಲಿ ತಮ್ಮ ಸಾಕ್ಷ್ಯ ವಿಚಾರಣೆ ಪ್ರಮಾಣ ಪತ್ರ ಮತ್ತು ಪಾಟೀ ಸವಾಲಿನ ದೃಢೀಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಒಪ್ಪಿ ಕೊಂಡಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ಸದರಿ ದಾವೆಯಲ್ಲಿ ಕ್ರಯ ಪತ್ರದ ದಿನಾಂಕ 23.12.2022 ಕ್ಕೆ ಸಂಬಂಧಪಟ್ಟಂತೆ ದಾವೆ ಹೂಡಿದ್ದೆ ಎಂದರೆ ಸರಿ. ಸಾಕ್ಷಿ ಸದರಿ ಕ್ರಯಪತ್ರದ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಾನು ಮೂಲ ದಾವೆ ಸಂಖ್ಯೆ 104/2024 ಸಲ್ಲಿಸುವ ಪೂರ್ವದಲ್ಲಿ ಕುಂದಾಪುರದ ನಮ್ಮ ವಕೀಲರ ಮೂಖಾಂತರ ನೋಟೀಸ್ ಕಳುಹಿಸಿದ್ದೆ ಎಂದರೆ ಸರಿ. ಸಾಕ್ಷಿ ಸದರಿ ನೋಟೀಸ್ ನ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ನೋಟೀಸ್ ಗೆ ಎದುರುಪಕ್ಷಗಾರರು ನನಗೆ ತಮ್ಮ ವಕೀಲರ ಮುಖಾಂತರ ಪ್ರತ್ಯುತ್ತರ ನೋಟೀಸ್ ಅನ್ನು ಕಳುಹಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಸದರಿ ನೋಟೀಸ್ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು.

2. ಸಾಕ್ಷಿಯು ಮಣಿಪಾಲ್ ಪೋಲೀಸ್ ಠಾಣೆಯವರು ನೀಡಿದ ಹಿಂಬರಹದ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ನಾನು ದಾವಾ ಆಸ್ತಿಯ ಸಂಬಂಧ ಪ್ರತಿವಾದಿಯರ ವಿರುದ್ಧ ದೂರು ಕೊಟ್ಟಿದ್ದು ಆದರೆ ಯಾವ ಠಾಣೆ ಎಂದು ನನಗೆ ಈಗ ನೆನಪಾಗುತ್ತಿಲ್ಲ. ನಾನು ದೂರು ಕೊಡುವ ಕಾಲಕ್ಕೆ ಮಣಿಪಾಲಿನ ಮನೆಯಲ್ಲಿ ವಾಸ ಇದ್ದೆ ಎಂದರೆ ಸರಿ. ಸಾಕ್ಷಿಗೆ ಸದರಿ ಮನೆಯ ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ಸದರಿ ನಿಡಿ-6 ರ ನಮ್ಮ ವಾಸದ ಮನೆಯ ಮೇಲೆ ಶ್ರೀನಿಧಿ ಹೆಗ್ಗೆ ಎಂಬ ಹಿರಿಯ ವಕೀಲರ ಕಚೇರಿ ಇರುತ್ತದೆ ಎಂದರೆ ಸರಿ. ನಿಡಿ-6 ರಲ್ಲಿ ಕಾಣುವ ಮನೆ ಮಣಿಪಾಲ್ ಪೋಲೀಸ್ ಠಾಣೆಯಿಂದ 100 ಮೀಟರ್ ದೂರದಲ್ಲಿ ಇರುತ್ತದೆ ಎಂದರೆ

ಸರಿ. ಸಾಕ್ಷಿಗೆ ಒಂದು ವಿಭಾಗ ಪತ್ರ ತೋರಿಸಲಾಗಿ ನನ್ನ ಮತ್ತು ನನ್ನ ತಾಯಿಯ ನಡುವೆ ವಿಭಾಗ ಪತ್ರ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-7 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಅದು ಮನೆಯ ಸಂಬಂಧ ಆಗಿದೆಯಾ ಎಂದು ಕೇಳಿರುತ್ತಾರೆ.

3. ಸಾಕ್ಷಿಗೆ ಈಗ ದಿನಾಂಕ 2.11.2023 ರಲ್ಲಿ ಅಧಿಕಾರ ಪತ್ರ ಬರೆದುಕೊಟ್ಟ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ದಿನೇಶ್ ಇವರಿಗೆ ಬರೆದುಕೊಟ್ಟ ಅಧಿಕಾರ ಪತ್ರ ಎಂದು ಹೇಳಿದ್ದು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-8 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಒಪ್ಪಂದ ಪತ್ರ ತೋರಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಸಾಕ್ಷಿ ಮುಂದುವರೆದು ಶಂಕರ್ ಕಾಂಪ್ಲೆಕ್ಸ್ ಗೆ ಸಂಬಂಧಿಸಿದ್ದು ಎಂದು ಹೇಳಿದ್ದು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-9 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಡಿ-9 ರಲ್ಲಿ ತಮ್ಮ ಸಹಿಗಳನ್ನು ತೋರಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಅವರ ಒಟ್ಟು 4 ಸಹಿಗಳನ್ನು ಕ್ರಮವಾಗಿ ನಿಡಿ-9 ಎ, ಬಿ, ಸಿ ಮತ್ತು ಡಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ತಾವು 2 ನೇ ಪ್ರತಿವಾದಿಗೆ ಮಾಡಿಕೊಟ್ಟ ಕ್ರಯ ಪತ್ರದ ಮೂಲ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯ ಅದನ್ನು ಒಪ್ಪಿ ಕೊಂಡಿದ್ದು ಸದರಿ ದಾಖಲೆಯನ್ನು ನಿಡಿ-10 ಎಂದು ಸಾಕ್ಷಿಯ ಏಳು ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-10(ಎ) ಯಿಂದ 10(ಜಿ) ಗುರುತಿಸಲಾಯಿತು.

4. ಸಾಕ್ಷಿಗೆ ದಿನಾಂಕ 02.11.2023 ರಂದು ತಾವು 1 ನೇ ಪ್ರತಿವಾದಿಗೆ ಮಾಡಿದ ವಿಲ್ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-11 ಎಂದು ಸಾಕ್ಷಿಯ ಒಟ್ಟು ನಾಲ್ಕು ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-11(ಎ) ಯಿಂದ 11(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಈ ಎಲ್ಲಾ ವಿಚಾರಗಳು ಈಗ ನನಗೆ ಗೊತ್ತಾಗುತ್ತದೆ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ಒಂದು ಕ್ರಯ ಪತ್ರ ತೋರಿಸಲಾಗಿ ಸಾಕ್ಷಿಯು ಸದರಿ ಕ್ರಯಪತ್ರದಲ್ಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಕ್ರಯ ಪತ್ರವನ್ನು ನಿಡಿ-12 ಎಂದು, ಸಾಕ್ಷಿಯ ಆರು ಸಹಿಗಳನ್ನು ಅವುಗಳನ್ನು ಕ್ರಮವಾಗಿ ನಿಡಿ-12(ಎ) ಯಿಂದ 12(ಎಫ್) ಎಂದು ಗುರುತಿಸಲಾಯಿತು. ನಾನು ಈ ದಿನ ನ್ಯಾಯಾಲಯಕ್ಕೆ ಬ್ರಹ್ಮಾವರದ

ಹತ್ತಿರ ಇರುವ ಆರೂರಿನಿಂದ ಬಂದಿರುತ್ತೇನೆ. ನಾನು ಆರೂರಿನ ನಮ್ಮ ಸ್ವಂತ ಮನೆಯಿಂದ ಬಂದಿರುತ್ತೇನೆ. ನಿಡಿ-6 ರಲ್ಲಿ ಕಾಣುವ ಮನೆಯಲ್ಲಿ ನಾನು ಎರಡು ಮೂರು ತಿಂಗಳಿನಿಂದ ವಾಸ ಮಾಡುತ್ತಿರುವುದಿಲ್ಲ. ಆರೂರಿನಲ್ಲಿ ನನ್ನನ್ನು ಮನ್ಮಥಭಟ್ ಇವರು ಆರೈಕೆ ಮಾಡುತ್ತಾ ಇರುತ್ತಾರೆ. ನಾನು ಈ ದಿನ ನ್ಯಾಯಾಲಯಕ್ಕೆ ಮನ್ಮಥಭಟ್ ಜೊತೆ ಬಂದಿರುತ್ತೇನೆ ಎಂದರೆ ಸರಿ.

5. ನಾನು ಪ್ರತಿವಾದಿ 1 ಮತ್ತು 2 ರವರಿಗೆ ಮಾಡಿಕೊಟ್ಟ ಕ್ರಯಪತ್ರ ಹಾಗೂ 1 ನೇ ಪ್ರತಿವಾದಿಗೆ ಮಾಡಿಕೊಟ್ಟ ಅಧಿಕಾರ ಪತ್ರಕ್ಕೆ ಮನ್ಮಥ ಭಟ್ ಇವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಾಯಿ ವಾಸಂತಿರಾವ್ ದಿನಾಂಕ 22.11.2025 ರಂದು ತೀರಿಕೊಂಡಿರುತ್ತಾರೆ. ನಮ್ಮ ತಾಯಿ ತೀರಿಕೊಳ್ಳುವ ಮೊದಲು ಅವರನ್ನು ಉಡುಪಿಯ ಹೈಟೆಕ್ ಆಸ್ಪತ್ರೆಯಲ್ಲಿ ಸೇರಿಸಿರುತ್ತೇವೆ. ಅವರಿಗೆ ತಲೆಗೆ ಗಾಯವಾದ ಕಾರಣ ಸದರಿಯವರು ಆಸ್ಪತ್ರೆಗೆ ಸೇರಿಸಿರುತ್ತೇವೆ. ಸದರಿಯವರು ಸಾಯುವ 7 ದಿನಗಳ ಮೊದಲು ಅವರನ್ನು ಆಸ್ಪತ್ರೆಗೆ ಸೇರಿಸಿದ್ದೆವು. ನಮ್ಮ ತಾಯಿ ಹೈಟೆಕ್ ಆಸ್ಪತ್ರೆಗೆ ದಾಖಲಾದ ನಂತರ ಅವರಿಗೆ ಪ್ರಜ್ಞೆಯೇ ಬಂದಿರುವುದಿಲ್ಲ ಎಂದರೆ ಸರಿ. ನಮ್ಮ ತಾಯಿಯನ್ನು ಆರೂರು ಮನಯಿಂದ ಹೈಟೆಕ್ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ ಎಂದರೆ ಸರಿ. ಹೈಟೆಕ್ ಆಸ್ಪತ್ರೆಯಲ್ಲಿ ಅವರನ್ನು ನೋಡಿಕೊಳ್ಳಲು ಮನ್ಮಥ ಭಟ್ ಇದ್ದು ನಮ್ಮ ತಾಯಿ ತೀರಿಕೊಂಡ ನಂತರ ಶ್ರೀನಿವಾಸ್ ಶೆಟ್ಟಿ ಬಂದಿರುತ್ತಾರೆ. ನಮ್ಮ ಅಮ್ಮನಿಗೆ ಡಾಕ್ಟರ್ ಶ್ರೀಪತಿ ಭಟ್ ಸೇರಿ ಒಟ್ಟು 5 ಜನ ಅಣ್ಣತಮ್ಮಂದಿರು ಇರುತ್ತಾರೆ.

6. ನನ್ನ ಮಾವಂದಿರರ ಪೈಕಿ ರಾಯಚೂರಿನಲ್ಲಿ ಇರುವವರನ್ನು ಹೊರತುಪಡಿಸಿ ಉಳಿದ ಮಾವಂದಿರು ಉಡುಪಿ, ಬ್ರಹ್ಮಾವರ ಮತ್ತು ಸುತ್ತಮುತ್ತ ವಾಸ ಇರುತ್ತಾರೆ ಎಂದರೆ ಸರಿ. ನಮ್ಮ ತಾಯಿ ತೀರಿಕೊಂಡಾಗ ನಮ್ಮ ತಾಯಿಯ ಸಹೋದರರಿಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿ. ಡಾಕ್ಟರ್ ಶ್ರೀಪತಿ ಭಟ್ ವೃತ್ತಿಯಲ್ಲಿ ವೈದ್ಯರು ಎಂದರೆ ಸರಿ. ನಮ್ಮ ತಾಯಿಯ ಶವಸಂಸ್ಕಾರ ಮಾಡುವ ಕಾಲಕ್ಕೆ ಮನ್ಮಥ ಭಟ್ ಮತ್ತು ಶ್ರೀನಿವಾಸ್ ಶೆಟ್ಟಿ ಬಿಟ್ಟು ಬೇರೆ ಯಾರೂ ಇರಲಿಲ್ಲ. ಚಿಕ್ಕಮಗಳೂರು ನ್ಯಾಯಾಲಯದಲ್ಲಿನ ದಾವೆ ಮತ್ತು ಈ ದಾವೆಯನ್ನು ನಾನು ಹಾಕಲು ಶ್ರೀನಿವಾಸ್ ಶೆಟ್ಟಿ ಇವರು ಕಾರಣೀಭೂತರು ಎಂದರೆ ಸರಿ. ನನಗೆ ಸದರಿ ಶ್ರೀನಿವಾಸ್ ಶೆಟ್ಟಿ ಪರಿಚಯ ಆಗಿ ಎರಡು ವರ್ಷ ಆಗಿರುತ್ತದೆ. ನಮ್ಮ ತಂದೆ

ಮನೋಹರ್ ರಾವ್ ಇವರ ಕಾಲದಿಂದಲೂ 1 ನೇ ಪ್ರತಿವಾದಿ ನಮ್ಮ ಕುಟುಂಬದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಇದ್ದರು ಎಂದರೆ ಸರಿ. 1 ನೇ ಪ್ರತಿವಾದಿ ನಮ್ಮ ಕುಟುಂಬಕ್ಕೆ 20 ವರ್ಷಗಳಿಂದ ಆತ್ಮೀಯರು ಇರುತ್ತಾರೆ ಎಂದರೆ ಸರಿ.

7. ನನಗೆ ಮನ್ಮಥ ಭಟ್ ಇವರು 8 ವರ್ಷಗಳಿಂದ ಪರಿಚಯ ಇರುತ್ತಾರೆ ಎಂದರೆ ಸರಿ. ನಾನು ನಿಡಿ-12 ರಂತೆ ದಿನೇಶ್ ಭಂಡಾರಿಗೆ ಕ್ರಯ ಪತ್ರ ಮಾಡಿಕೊಡುವ ಪೂರ್ವದಲ್ಲಿ ಯಾವುದೇ ಆಸ್ತಿಯನ್ನು ಅವರಿಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಚಿಕ್ಕಮಗಳೂರಿನ, ಕಡೂರು, ಕೊಪ್ಪ, ಶೃಂಗೇರಿ, ತೀರ್ಥಹಳ್ಳಿ, ಬ್ರಹ್ಮಾವರ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಪ್ರತ್ಯೇಕ ವಕೀಲರು ಮತ್ತು ದಸ್ತವೇಜು ಬರಹಗಾರರು ಇರುತ್ತಾರೆ ಎಂದರೆ ಸರಿ. ಕೊಪ್ಪ ಹಾಗೂ ಬೇರೆ ನ್ಯಾಯಾಲಯಗಳಲ್ಲಿ ಇರುವ ನಮ್ಮ ದಾವೆಗಳಿಗೆ ಬೇರೆ ಬೇರೆ ವಕೀಲರು ಇರುತ್ತಾರೆ ಎಂದರೆ ಸರಿ. ನಮ್ಮ ತಾಯಿ ಯಾವ ಯಾವ ಕೇಸುಗಳನ್ನು ಯಾವ ಯಾವ ವಕೀಲರ ಮುಖಾಂತರ ಹಾಕಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಸ್ತವೇಜಿಗೆ ಸಂಬಂಧಪಟ್ಟಂತೆ ಮನ್ಮಥ ಭಟ್ ಇವರಿಗೆ 4 ಎಕ್ರೆ ಜಾಗವನ್ನು ಉಚಿತವಾಗಿ ಕೊಟ್ಟಿರುತ್ತೇವೆ. ನಾನು ಡಿಗ್ರಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ಯಾವುದೇ ದಸ್ತವೇಜನ್ನು ಮಾಡಬೇಕಾದರೆ ಮನ್ಮಥ್ ಭಟ್ ಇವರನ್ನು ಬಿಟ್ಟು ಮಾಡುವುದಿಲ್ಲ ಎಂದರೆ ಸರಿ. ದಸ್ತಮೇ ಆಗುವಾಗ ಮನ್ಮಥಭಟ್ ಹಾಜರಿರುತ್ತಾರೆ ಅಥವಾ ಸಾಕ್ಷಿಯಾಗಿ ಸಹಿ ಮಾಡುತ್ತಾರೆ ಎಂದರೆ ಸರಿ. ಮನ್ಮಥಭಟ್ ಹೇಳಿದ ಮೇಲೆ ನಾನು ಸಹಿ ಮಾಡುತ್ತೇನೆ ಎಂದರೆ ಸಾಕ್ಷಿ ನಾನು ಯೋಚನೆ ಮಾಡಿ ಸಹಿ ಮಾಡುತ್ತೇನೆ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಸ್ವತಃ ಮುಂದುವರೆದು ತಾವು ಓದಿಯೇ ಸಹಿ ಮಾಡುತ್ತೇನೆ ಎಂದು ಉತ್ತರಿಸಿರುತ್ತಾರೆ.

8. ಮನ್ಮಥ ಭಟ್ ಇವರು ನಮ್ಮ ಸಂಬಂಧಿಕರು ಹಾಗೂ ನಮ್ಮ ಕುಟುಂಬದವರು ಇರುವುದಿಲ್ಲ ಎಂದರೆ ಸರಿ. ನಮ್ಮ ಆರೂರು ಕುಟುಂಬ ಕೊಪ್ಪ, ಉಡುಪಿ, ಬ್ರಹ್ಮಾವರ ಹಾಗೂ ಮಂಗಳೂರಿನಲ್ಲಿ ಪ್ರಭಾವಿ ಕುಟುಂಬ ಇರುತ್ತದೆ ಎಂದರೆ ಸರಿ. ಮನ್ಮಥಭಟ್ ಮತ್ತು ಶ್ರೀನಿವಾಸ್ ಶೆಟ್ಟಿ ನಮ್ಮ ಕುಟುಂಬಕ್ಕೆ ಬಂದ ನಂತರ ನಮ್ಮ ಸಂಬಂಧಿಕರು ನಮ್ಮ ಜೊತೆ ಸೇರಿರುವುದಿಲ್ಲ ಎಂದರೆ ಸಾಕ್ಷಿ ಸಂಪರ್ಕದಲ್ಲಿ ಇರುತ್ತಾರೆ ಆದರೆ ನಮ್ಮ ತಾಯಿಯ ಶವಸಂಸ್ಕಾರಕ್ಕೆ ಆರೂರು ಕುಟುಂಬದವರು ಬಂದಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಪೊಲೀಸ್ ಠಾಣೆಗೆ ದೂರು ಕೊಡಲು ಮನ್ಮಥ್ ಭಟ್ ಮತ್ತು ಶ್ರೀನಿವಾಸ್ ಶೆಟ್ಟಿ ಕೊಟ್ಟಿರುತ್ತಾರೆ ಎಂದರೆ ಸರಿ. ಶ್ರೀನಿವಾಸ್ ಶೆಟ್ಟಿ ಇವರ ಪತ್ನಿ ಪೊಲೀಸ್ ಇಲಾಖೆಯಲ್ಲಿ ಸಿ.ಪಿ.ಐ. ಆಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಶ್ರೀನಿವಾಸ್ ಶೆಟ್ಟಿ ಇವರಿಗೆ ಕೊಪ್ಪದಲ್ಲಿರುವ ಮನೆಯ ಬಗ್ಗೆ ಜಿ.ಪಿ.ಎ. ಬರೆದುಕೊಟ್ಟಿರುತ್ತೇನೆ. ನಾನು ಕೊಪ್ಪದ ಮನೆಯನ್ನು ಹೊರತುಪಡಿಸಿ ಶ್ರೀನಿವಾಸ್ ಶೆಟ್ಟಿ ಇವರಿಗೆ ಬೇರೆ ಯಾವುದೇ ಆಸ್ತಿ ಮತ್ತು ವಿಚಾರಕ್ಕೆ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ.

9. ನಮ್ಮ ತಂದೆ ತೀರಿಕೊಂಡ ನಂತರ ನಾನು ಮತ್ತು ನಮ್ಮ ತಾಯಿ ನಮ್ಮ ಕುಟುಂಬದ ಆಸ್ತಿಗಳನ್ನು ಮಾರಾಟ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿ. ನನಗೆ ಕೊಪ್ಪದಲ್ಲಿರುವ ದಸ್ತವೇಜು ಬರಹಗಾರ ನಾಗರಾಜ್ ಇವರ ಪರಿಚಯ ಇರುತ್ತದೆ. ಇನ್ನಿಬ್ಬರ ಹೆಸರು ನೆನಪಿರುವುದಿಲ್ಲ. ನಾನು ದಸ್ತವೇಜ ಅನ್ನು ನಾನು ಮೊದಲು ಓದಿ ನನಗೆ ಗೊತ್ತಾಗದೇ ಇದ್ದರೆ ಮನ್ಮಥ ಭಟ್ ಇವರನ್ನು ಇರಿಸಿಕೊಂಡು ಸದರಿ ದಾಖಲೆಯ ಬಗ್ಗೆ ತಿಳಿದುಕೊಳ್ಳುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಅನ್ನು ಚೆನ್ನಾಗಿ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ನನ್ನ ನಂಬಿಕೆಯ ಮೇರೆಗೆ ಇಲ್ಲಿಯವರೆಗೆ ಮನ್ಮಥಭಟ್ ನನ್ನ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಮ್ಮ ತಾಯಿಯ ಸಾವಿನ ಬಗ್ಗೆ ಅನುಮಾನ ಪಟ್ಟು ಆರೂರು ಕುಟುಂಬದವರು ಮತ್ತು ನಮ್ಮ ತಾಯಿಯ ಕಡೆಯವರು ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ವಿಚಾರದ ಬಗ್ಗೆ ಪೊಲೀಸರು ತನಿಖೆ ಮಾಡುತ್ತಾ ಇರುತ್ತಾರೆ ಎಂದರೆ ಸರಿ. ನಮ್ಮ ತಾಯಿ ಬರೆದುಕೊಟ್ಟ ಆಸ್ತಿಯ ಬಗ್ಗೆ ನ್ಯಾಯಾಲಯಕ್ಕೆ ಹೋಗುವುದು ಬೇಡ ಎಂಬ ಅಭಿಪ್ರಾಯ ಇತ್ತು ಎಂದರೆ ಸರಿ. ಆ ಕಾರಣದಿಂದ ನಮ್ಮ ತಾಯಿ ಚಿಕ್ಕಮಗಳೂರಿನ ನ್ಯಾಯಾಲಯದ ಮೂಲ ದಾವೆ ಸಂಃ 104/2024 ರಲ್ಲಿ ಹಾಜರಾಗಿರುವುದಿಲ್ಲ ಎಂದರೆ ಸರಿ.

10. ಪ್ರತಿವಾದಿ 1 ಮತ್ತು 2 ರವರು ನಮ್ಮ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಶ್ರೀನಿವಾಸ್ ಶೆಟ್ಟಿ ಮತ್ತು ಮನ್ಮಥಭಟ್ ಇವರ ಪ್ರಚೋದನೆಯಿಂದ ಈ ದಾವೆಯನ್ನು ಹೂಡಿದ್ದೇನ ಎಂದರೆ ಸರಿ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರಕ್ಕೆ

ನಮ್ಮ ತಾಯಿ ಎಲ್ಲಾ ಪುಟಗಳಿಗೆ ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಾಡಿರಬಹುದು ಎಂದು ಉತ್ತರಿಸಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ